ಆ) ಇವರು ಮಾಡಿರುವ ಸಾಹಸ ಕನ್ನಡಿಗರಿಗೆ ಹೆಮ್ಮೆಯ ಸಾಹಸವಾಗಿದ್ದು, ಸರ್ಕಾರದ ವತಿಯಿಂದ ಸನ್ಮಾನಿಸುವ ಇಚ್ಛೆ ಇದೆಯೇ ?

ಇ) ಇವರಿಗೆ ಸರ್ಕಾರದ ವತಿಯಿಂದ ನಗದು ಬಹುಮಾನ ನೀಡುವ ಪ್ರಸ್ತಾವನೆ ಇದೆಯೇ ?

ಈ) ಇವರೊಂದಿಗಿದ್ದು, ಸಾಹಸಿ, ಕಾಣೆಯಾಗಿರುವ ಕನ್ನಡಿಗ ವಾಯುಪಡೆ ಅಧಿಕಾರಿ ಚೈತನ್ಯ ಇವರು ಹೆಸರು ಉಳಿದವರಿಗೆ ಸ್ಫೂರ್ತಿಯಾಗಲು ಇವರ ಹೆಸರಿನಲ್ಲಿ ಬೆಂಗಳೂರಿನಲ್ಲಿರುವ ಯಾವುದಾದರೂ ವೃತ್ತಕ್ಕೆ ಅಥವಾ ರಸ್ತೆಗೆ ಇವರ ಹೆಸರಿಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) –

ಅ) ಇಲ್ಲ.

ಆ) ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ಈ) ಈ ವಿಷಯವು ಬೆಂಗಳೂರುಮಹಾನಗರ ಪಾಲಿಕೆಗೆ ಸಂಬಂಧಿಸಿದ್ದು, ಪ್ರಸ್ತಾವನೆ ಸಲ್ಲಿಸಲಾಗುವುದು.

3570 (3892) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) –ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗುನ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೆ?

ಅ) ಮೀನುಗಾರಿಕೆ ಅದರಲ್ಲೂ ಸಮುದ್ರ ಮೀನುಗಾರಿಕೆಯಿಂದ ಸರ್ಕಾರಕ್ಕೆ ವರ್ಷಕ್ಕೆ ಬರುವ ರಾಜಸ್ವದ ಪ್ರಮಾಣವೆಷ್ಟು ;

ಆ) ಈ ರಾಜಸ್ವದಲ್ಲಿ ಸಮುದ್ರ ಮೀನುಗಾರರಿಗೆ ಮಾತ್ರ ವ್ಯಯಮಾಡಲಾದ ಖರ್ಚೆಷ್ಟು ;

ಇ) ಸರ್ಕಾರ ವಿಶೇಷವಾಗಿ ಯಾವ ರೀತಿಯ ಹೊಸ ಪ್ಯಾಕೇಜನ್ನು ಮೀನುಗಾರರ ಅನುಕೂಲಕ್ಕಾಗಿ ರಚಿಸಿದೆ ;

ಈ) ಇದರಲ್ಲಿ ಸರ್ಕಾರದಿಂದ ಎಷ್ಟು ಹಣ ವೆಚ್ಚವಾಗುತ್ತಿದೆ ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) –

ಅ) 2004–05ನೇ ಸಾಲಿನಲ್ಲಿ ಸರ್ಕಾರಕ್ಕೆ ಮೀನುಗಾರಿಕೆಯಿಂದ ಬಂದಿರುವ ರಾಜಸ್ವ ರೂ.272.85ಲಕ್ಷ ಆಗಿರುತ್ತದೆ. ಇದರಲ್ಲಿ ಸಮುದ್ರ ಮೀನುಗಾರಿಕೆಯಿಂದ ರೂ.99.50 ಲಕ್ಷ ಆದಾಯ ಬಂದಿರುತ್ತದೆ.

ಆ) ಸರ್ಕಾರದ ನಿಯಮದಂತೆ ರಾಜಸ್ವದಲ್ಲಿ ನೇರವಾಗಿ ಯಾವುದೇ ಖರ್ಚು ಮಾಡುವುದಿಲ್ಲ. ಪ್ರತಿವರ್ಷ ಮೀನುಗಾರಿಕೆ ಬಂದರಿಗೆ ಒದಗಿಸಲಾಗಿರುವ ಅನುದಾನದಲ್ಲಿ ವ್ಯಯ ಮಾಡಲಾಗುತ್ತದೆ.

ಇ) ಮೀನುಗಾರರ ಅನುಕೂಲಕ್ಕಾಗಿ ಯಾವುದೇ ಹೊಸ ಪ್ಯಾಕೇಜನ್ನು ಸರ್ಕಾರವು ರಚಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

3571 (4546) ಶ್ರೀ ಮಲ್ಲಿಕಾರ್ಜುನ ಸಿದ್ದರಾಮಪ್ಪ ಖೂಬ (ಬಸವಕಲ್ಯಾಣ)– (ಕಾಲಾವಕಾಶ ಪಡೆಯಲಾದ ಪ್ರಶ್ನೆ) – ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಪುರಸಭೆಗೆ ಸೇರಿದ ಜಾಗ/ನಿವೇಶನ ಮತ್ತು ವಾಣಿಜ್ಯ ಸಂಕೀರ್ಣದಲ್ಲಿರುವ ಅಂಗಡಿಗಳ ಸಂಖ್ಯೆ ಎಷ್ಟು ;

ಆ) ಇವುಗಳನ್ನು ಯಾರು ಯಾರಿಗೆ ಎಷ್ಟು ಅವಧಿಗೆ ಬಾಡಿಗೆ/ಲೀಜ್ ಆಧಾರದ ಮೇಲೆ ನೀಡಲಾಗಿದೆ ಹಾಗೂ ಇದಕ್ಕೆ ನಿಗಧಿ ಮಾಡಿರುವ ಬಾಡಿಗೆ ಮೊತ್ತವೆಷ್ಟು ; ಬಾಕಿ ಇರುವ ಬಾಡಿಗೆ ಮೊತ್ತವೆಷ್ಟು ;

ಇ) ಇದುವರೆವಿಗೆ ವಸೂಲಾಗಿರುವ ಬಾಡಿಗೆ ಮೊತ್ತವೆಷ್ಟು ; ಬಾಕಿ ಇರುವ ಬಾಡಿಗೆ ಮೊತ್ತವೆಷ್ಟು ; ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ಬಾಡಿಗೆ/ಲೀಜ್ ಅವಧಿ ಮುಕ್ತಾಯಗೊಂಡಿದೆ ;

ಈ) ಅವಧಿ ಮುಕ್ತಾಯಗೊಂಡಿರುವವರನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು; ಅವಧಿ ಮುಕ್ತಾಯಗೊಂಡಿರುವ ಬಾಡಿಗೆ/ಲೀಜ್‌ದಾರರಿಗೆ ಪುರಸಭೆಗೆ ಸೇರಿದ ಆಸ್ತಿಯನ್ನು ಅಕ್ರಮವಾಗಿಕಡಿಮೆ ಮೊತ್ತಕ್ಕೆ ಬರೆದು ಕೊಡುತ್ತಿರುವುದು ನಿಜವೇ ;

ಉ) ಹಾಗಿದ್ದಲ್ಲಿ, ಈ ಪ್ರಕರಣದ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಿ ಪುರಸಭೆಗೆ ಸೇರಿದ ಆಸ್ತಿಯನ್ನು ರಕ್ಷಣೆ ಮಾಡಲಾಗುವುದೇ ?

ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು

ಅ) ಬಸವಕಲ್ಯಾಣ ಪುರಸಭೆಗೆ ಒಂದು ಅಂಗಡಿ ಮಳಿಗೆಮತ್ತು 27 ಖಾಲಿ ನಿವೇಶನಗಳು ಸೇರಿರುತ್ತವೆ.

ಆ) ಅನುಬಂಧದಲ್ಲಿ ಒದಗಿಸಿದೆ.